# ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ತುಮಕೂರು (ದ) ಶೈಕ್ಷಣಿಕ ಜಿಲ್ಲೆ

**ಎಸ್.ಎಸ್.ಎಲ್.ಸಿ. ಜಿಲ್ಲಾ ಮಟ್ಟದ ಅಭ್ಯಾಸ ಪತ್ರಿಕೆ** JANUARY-2024

**ಸಮಯ: 3ಗಂಟೆ 15ನಿಮಿಷಗಳು** **ವಿಷಯ: ಗಣಿತ** **ಗರಿಷ್ಠ ಅಂಕಗಳು:80**

I ಕೆಳಗಿನ ಪ್ರಶ್ನೆಗಳಿಗೆ ಅಥವಾ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ. **$8\times1=8$**

**1)** $\mathbf{P-1,\ P+3,\ 3P-1}$ ಇವು ಸಮಾಂತರ ಶ್ರೇಢಿಯಲ್ಲಿದ್ದರೆ, 'P' ನ ಬೆಲೆಯು

a) 4 b) -4 c) 2 d) -2

**2)** $\Delta$ ABC ಮತ್ತು $\Delta$ DEF ಗಳಲ್ಲಿ $\frac{AB}{DE}=\frac{BC}{FD}$ ಆಗಿದೆ. ಈ ಎರಡು ತ್ರಿಭುಜಗಳು ಸಮರೂಪವಾಗಬೇಕಾದರೆ

a) $\angle B = \angle E$ b) $\angle A = \angle D$ c) $\angle B = \angle D$ d) $\angle A = \angle F$

**3)** ಚಿತ್ರದಲ್ಲಿ '0' ಕೇಂದ್ರವಿರುವ ವೃತ್ತದಲ್ಲಿ, AB ವ್ಯಾಸ ಮತ್ತು ಜ್ಯಾ AC ಗಳ ನಡುವಿನ ಕೋನ $\angle BAC = 30^0$ ಆಗಿದೆ. DC ಯು ಸ್ಪರ್ಶಕವಾಗಿದ್ದರೆ $\Delta$ BCD ಯು




**a)** ಸಮದ್ವಿಬಾಹು ತ್ರಿಭುಜ **b)** ಸಮಬಾಹು ತ್ರಿಭುಜ

**c)** ಲಂಬಕೋನ ತ್ರಿಭುಜ **d)** ಲಘುಕೋನ ತ್ರಿಭುಜ

**4)** $x+2y-4=0$ ಮತ್ತು $2x+4y-12=0$ ಈ ಸಮೀಕರಣಗಳು ಪ್ರತಿನಿಧಿಸುವ ರೇಖೆಗಳು

**a)** ಛೇದಿಸುವ ರೇಖೆಗಳು **b)** ಸಮಾಂತರ ರೇಖೆಗಳು

**c)** ಐಕ್ಯವಾಗುವ ರೇಖೆಗಳು **d)** ಪರಸ್ಪರ ಲಂಬ ರೇಖೆಗಳು

**5)** ಯೂಕ್ಲಿಡ್‌ನ ಭಾಗಾಕಾರ ಅನುಪ್ರಮೇಯದ ಪ್ರಕಾರ ದತ್ತ ಧನ ಪೂರ್ಣಾಂಕಗಳಾದ **a** ಮತ್ತು **b** ಗಳು ಈ ಕೆಳಗಿನ ಯಾವ ಹೇಳಿಕೆಗೆ ಸರಿಹೊಂದುವಂತೆ **q** ಮತ್ತು **r** ಎಂಬ ಎರಡು ಅನನ್ಯ ಪೂರ್ಣಾಂಕಗಳಿರುತ್ತವೆ ?

**a)** $a = bq + r,\ 0 < r < b$ **b)** $a = bq + r,\ 0 \le r \le b$

**c)** $a = bq + r,\ 0 \le r < b$ **d)** $a = bq + r,\ 0 < b < r$

**6)** ಕೊಟ್ಟಿರುವ ನಕ್ಷೆಯಲ್ಲಿ $y = p(x)$ ಬಹುಪದೋಕ್ತಿಯು ಹೊಂದಿರುವ ಶೂನ್ಯತೆಗಳ ಸಂಖ್ಯೆಯು




**a)** 3 **b)** 2

**c)** 0 **d)** 4

**7)** ಈ ಕೆಳಗಿನ ಸಮೀಕರಣಗಳಲ್ಲಿ, ವಾಸ್ತವ ಮತ್ತು ಸಮ ಮೂಲಗಳನ್ನು ಹೊಂದಿರುವ ಸಮೀಕರಣವು

**a)** $2x^2-4x+3=0$ **b)** $x^2-4x+4=0$

**c)** $3x^2-4x+4=0$ **d)** $x^2-2\sqrt{2}x-6=0$

**8)** ಒಂದು ಘನಾಕೃತಿಯನ್ನು ಮತ್ತೊಂದು ಘನಾಕೃತಿಯಾಗಿ ಪರಿವರ್ತಿಸಿದಾಗ, ಹೊಸ ಘನಾಕೃತಿಯ ಘನಫಲವು

**a)** ಹೆಚ್ಚಾಗುತ್ತದೆ **b)** ಕಡಿಮೆಯಾಗುತ್ತದೆ

**c)** ಸ್ಥಿರವಾಗಿರುತ್ತದೆ **d)** ದ್ವಿಗುಣಗೊಳ್ಳುತ್ತದೆ

II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **8×1=8**

9) "ಮೂಲ ಸಮಾನುಪಾತತೆಯ ಪ್ರಮೇಯ" (ಥೇಲ್ಸ್‌ನ ಪ್ರಮೇಯ) ವನ್ನು ನಿರೂಪಿಸಿ.

10) ಮೂಲ ಬಿಂದುವಿನಿಂದ $(x, y)$ ಬಿಂದುವಿಗೆ ಇರುವ ದೂರವನ್ನು ಲೆಕ್ಕಿಸುವ ಸೂತ್ರ ಬರೆಯಿರಿ.

11) **( 7, 2)** ಮತ್ತು **(3, 4)** ಈ ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

12) $p(x) = x^4 - 5x^2 + 2x + 5$ ಈ ಬಹುಪದೋಕ್ತಿಯ ಮಹತ್ತಮ ಘಾತವನ್ನು (ಡಿಗ್ರಿ) ಬರೆಯಿರಿ.

13) ಶೂನ್ಯತೆಗಳ ಮೊತ್ತ **3** ಮತ್ತು ಗುಣಲಬ್ಧ $-2$ ಹೊಂದಿರುವ ವರ್ಗ ಬಹುಪದೋಕ್ತಿಯನ್ನು ಕಂಡು ಹಿಡಿಯಿರಿ.

14) $x = 2^3 \times 3 \times 5^2$, $y = 2^2 \times 3^3$, ಆದರೆ ಮ.ಸಾ.ಅ $(x, y)$ ನ್ನು ಕಂಡು ಹಿಡಿಯಿರಿ.

15) ಶಂಕುವಿನ ಭಿನ್ನಕದ ಘನಫಲವನ್ನು ಕಂಡುಹಿಡಿಯುವ ಸೂತ್ರ ಬರೆಯಿರಿ.

16) ಒಂದು ಘಟನೆ **'E'**, ಗೆ $P(E) = 0.05$ ಆದರೆ $P(\bar{E})$ ಕಂಡು ಹಿಡಿಯಿರಿ.

III ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **8×2=16**

17) **3, 8, 13, ..........**ಈ ಸಮಾಂತರ ಶ್ರೇಢಿಯ **20**ನೇ ಪದವನ್ನು ಕಂಡು ಹಿಡಿಯಿರಿ.

18) ಕೊಟ್ಟಿರುವ ರೇಖಾತ್ಮಕ ಸಮೀಕರಣಗಳನ್ನು ಸೂಕ್ತ ವಿಧಾನದಿಂದ ಬಿಡಿಸಿ.

$2x + 3y = 7$

$2x + y = 5$

19) **Δ ABC ~ Δ DEF** ಮತ್ತು ಅವುಗಳ ವಿಸ್ತೀರ್ಣಗಳು ಕ್ರಮವಾಗಿ **$36cm^2$** ಮತ್ತು **$144\ cm^2$** ಗಳಾಗಿದ್ದು, **EF = 10cm,** ಆದಾಗ **BC** ಅಳತೆಯನ್ನು ಕಂಡು ಹಿಡಿಯಿರಿ.

20) $2 + \sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ. **OR**

ಯೂಕ್ಲಿಡ್‌ನ ಭಾಗಾಕಾರ ಕ್ರಮವಿಧಿ ಉಪಯೋಗಿಸಿ **24** ಮತ್ತು **40** ರ ಮ.ಸಾ.ಅ ಕಂಡು ಹಿಡಿಯಿರಿ.

21) $cosec\theta = \frac{13}{12}$, ಆದರೆ $cos\theta$ ದ ಬೆಲೆಯನ್ನು ಕಂಡು ಹಿಡಿಯಿರಿ

22) **3.5cm** ತ್ರಿಜ್ಯವಿರುವ ವೃತ್ತವನ್ನು ರಚಿಸಿರಿ ಮತ್ತು ಸ್ಪರ್ಶಕಗಳ ನಡುವಿನ ಕೋನ **$60^0$** ಇರುವಂತೆ ವೃತ್ತಕ್ಕೆ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿ.

23) $x^2 - 12x + 27 = 0$ ಈ ಸಮೀಕರಣದ ಮೂಲಗಳನ್ನು 'ವರ್ಗ ಸಮೀಕರಣದ ಸೂತ್ರ' ಉಪಯೋಗಿಸಿ ಕಂಡುಹಿಡಿಯಿರಿ.

**OR**

$x^2 + 3x + 2 = 0$ ವರ್ಗ ಸಮೀಕರಣದ ಶೋಧಕವನ್ನು ಕಂಡುಹಿಡಿದು, ಮೂಲಗಳ ಸ್ವಭಾವವನ್ನು ಬರೆಯಿರಿ.

24) ಒಂದು ಚೀಲದಲ್ಲಿ **5** ಕೆಂಪು ಚೆಂಡುಗಳು, **8** ಹಸಿರು ಚೆಂಡುಗಳು ಮತ್ತು **7** ಬಿಳಿ ಚೆಂಡುಗಳಿವೆ. ಚೀಲದಿಂದ ಯಾದೃಚ್ಛಿಕವಾಗಿ ಒಂದು ಚೆಂಡನ್ನು ಹೊರ ತೆಗೆಯಲಾಗಿದೆ. ಆ ಚೆಂಡು ಹಸಿರು ಅಥವಾ ಕೆಂಪು ಚೆಂಡಾಗಿಲ್ಲದ ಸಂಭವನೀಯತೆಯನ್ನು ಕಂಡು ಹಿಡಿಯಿರಿ .

IV ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **9×3=27**

25) $\sqrt{2}$ ಮತ್ತು $-\sqrt{2}$ ಇವು $2x^4 - 3x^3 - 3x^2 + 6x - 2$ ರ ಎರಡು ಶೂನ್ಯತೆಗಳಾದರೆ, ಅದರ ಎಲ್ಲಾ ಶೂನ್ಯತೆಗಳನ್ನು ಕಂಡು ಹಿಡಿಯಿರಿ. **OR**

$p(x) = 2x^2 - 8x + 6$ ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡು ಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ.




**26)** ಚಿತ್ರದಲ್ಲಿ, **BC = BD = 8cm, AC = AD = 15cm** ಮತ್ತು **‘0’** ವೃತ್ತ ಕೇಂದ್ರವಾಗಿದೆ. ಛಾಯೆಗೊಳಿಸಿದ ವಲಯದ ವಿಸ್ತೀರ್ಣವನ್ನು ಕಂಡು ಹಿಡಿಯಿರಿ $(\pi = 3.14)$

**27)** “ ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮವಾಗಿರುತ್ತದೆ” ಎಂದು ಸಾಧಿಸಿ.

**28)** $\frac{\text{Cos A}}{1-\text{Sin A}} + \frac{1-\text{SinA}}{\text{Cos A}} = 2\ \text{SecA}$ ಎಂದು ಸಾಧಿಸಿ.

ಅಥವಾ

$\left(\frac{1+Sin\theta-Cos\theta}{1+Sin\theta+Cos\theta}\right)^2 = \frac{1-Cos\theta}{1+Cos\theta}$ ಎಂದು ಸಾಧಿಸಿ.

**29)** ಈ ಕೆಳಗಿನ ದತ್ತಾಂಶಗಳಿಗೆ ಸರಾಸರಿಯನ್ನು ಕಂಡು ಹಿಡಿಯಿರಿ.

| ವರ್ಗಾಂತರ | ಆವೃತ್ತಿ |
|---|---|
| 0 – 8 | 5 |
| 8 – 16 | 9 |
| 16 – 24 | 10 |
| 24 – 32 | 8 |
| 32 – 40 | 8 |

ಅಥವಾ

ಈ ಕೆಳಗಿನ ದತ್ತಾಂಶಗಳಿಗೆ ಬಹುಲಕವನ್ನು ಕಂಡು ಹಿಡಿಯಿರಿ.

| ವರ್ಗಾಂತರ | ಆವೃತ್ತಿ |
|---|---|
| 10 – 25 | 4 |
| 25 – 40 | 5 |
| 40 – 55 | 3 |
| 55 – 70 | 7 |
| 70 – 85 | 6 |
| 85 – 100 | 5 |

**30)** ಎರಡು ಚೌಕಗಳ ವಿಸ್ತೀರ್ಣಗಳ ಮೊತ್ತವು **468m²**. ಅವುಗಳ ಸುತ್ತಳತೆಗಳ ವ್ಯತ್ಯಾಸವು **24m** ಆದರೆ ಆ ಚೌಕಗಳ ಬಾಹುಗಳ ಅಳತೆ ಕಂಡು ಹಿಡಿಯಿರಿ .

**31)** **5cm, 6cm** ಮತ್ತು **7cm** ಬಾಹುಗಳಿರುವ ಒಂದು ತ್ರಿಭುಜವನ್ನು ರಚಿಸಿ, ನಂತರ ಮತ್ತೊಂದು ತ್ರಿಭುಜವನ್ನು, ಅದರ ಪ್ರತಿಯೊಂದು ಬಾಹುವು ಮೊದಲು ರಚಿಸಿದ ತ್ರಿಭುಜದ ಅನುರೂಪ ಬಾಹುಗಳ $\frac{7}{5}$ ರಷ್ಟಿರುವಂತೆ ರಚಿಸಿ.

**32)** **(6, –9)** ಮತ್ತು **(4, 6)** ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು, ಒಂದು ಬಿಂದುವು **3 : 4** ಅನುಪಾತದಲ್ಲಿ ಆಂತರಿಕವಾಗಿ ವಿಭಾಗಿಸಿದರೆ, ಆ ಬಿಂದುವಿನ ನಿರ್ದೇಶಾಂಕಗಳನ್ನು ಕಂಡು ಹಿಡಿಯಿರಿ.

ಅಥವಾ

**( –1, 3) (2, K)** ಮತ್ತು **(5, –1)** ಬಿಂದುಗಳು ಸರಳರೇಖಾಗತವಾಗಿದ್ದರೆ **‘K’** ನ ಬೆಲೆಯನ್ನು ಕಂಡು ಹಿಡಿಯಿರಿ.

**33)** ಒಂದು ಪ್ರದೇಶದ ವ್ಯಾಪಾರ ಮಳಿಗೆಯ **30** ಅಂಗಡಿಗಳು ಗಳಿಸಿದ ವಾರ್ಷಿಕ ಲಾಭದ ವಿತರಣೆಯನ್ನು ಈ ಕೆಳಗೆ ನೀಡಿದೆ. ಈ ದತ್ತಾಂಶಗಳಿಗೆ 'ಅಧಿಕ ಇರುವ ವಿಧಾನದ' ಓಜೀವ್‌ನ್ನು ರಚಿಸಿರಿ.

| ಲಾಭ (ಲಕ್ಷ ರೂ ಗಳಲ್ಲಿ) | ಅಂಗಡಿಗಳ ಸಂಖ್ಯೆ (ಆವೃತ್ತಿ) |
|---|---|
| 5 ಅಥವಾ 5ಕ್ಕಿಂತ ಅಧಿಕ | 30 |
| 10 ಅಥವಾ 10ಕ್ಕಿಂತ ಅಧಿಕ | 28 |
| 15 ಅಥವಾ 15ಕ್ಕಿಂತ ಅಧಿಕ | 16 |
| 20 ಅಥವಾ 25ಕ್ಕಿಂತ ಅಧಿಕ | 14 |
| 25 ಅಥವಾ 25ಕ್ಕಿಂತ ಅಧಿಕ | 10 |
| 30 ಅಥವಾ 30ಕ್ಕಿಂತ ಅಧಿಕ | 7 |
| 35 ಅಥವಾ 35 ಕ್ಕಿಂತ ಅಧಿಕ | 3 |

**V** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **4×4=16**

**34)** ಒಂದು ಸಮಾಂತರ ಶ್ರೇಢಿಯ ಐದನೇ ಪದವು ಎರಡನೇ ಪದದ ಮೂರರಷ್ಟಿದೆ ಮತ್ತು ಹನ್ನೆರಡನೇ ಪದವು ಆರನೇ ಪದದ ಎರಡರಷ್ಟಕ್ಕಿಂತ 1 ಹೆಚ್ಚಾಗಿದ್ದರೆ, 16 ನೇ ಪದವನ್ನು ಕಂಡು ಹಿಡಿಯಿರಿ.

ಅಥವಾ

**'n'** ಪದಗಳಿರುವ ಎರಡು ಸಮಾಂತರ ಶ್ರೇಡಿಗಳ ಮೊತ್ತಗಳ ಅನುಪಾತವು **(7n + 1) : (4n + 27)** ಆಗಿದೆ. ಆ ಶ್ರೇಢಿಗಳ 11ನೇ ಪದಗಳ ಅನುಪಾತವನ್ನು ಕಂಡು ಹಿಡಿಯಿರಿ.

**35)** ಕೆಳಗಿನ ರೇಖಾತ್ಮಕ ಸಮೀಕರಣಗಳ ಜೋಡಿಯ ಪರಿಹಾರವನ್ನು ನಕ್ಷೆಯ ವಿಧಾನದಿಂದ ಕಂಡು ಹಿಡಿಯಿರಿ.

$2x - y = 7$

$x + y = 2$

**36)** "ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮವಾಗಿರುತ್ತದೆ" ಎಂದು ಸಾಧಿಸಿ.

**37)** ಒಂದು ಜೆಟ್ ವಿಮಾನವನ್ನು ನೆಲದ ಮೇಲಿನ **A** ಬಿಂದುವಿನಿಂದ ನೋಡಿದಾಗ ಉಂಟಾದ ಉನ್ನತ ಕೋನವು $60^0$ ಆಗಿದೆ. **15** ಸೆಕೆಂಡ್‌ಗಳ ಹಾರಾಟದ ನಂತರ ಉನ್ನತ ಕೋನವು $30^0$ ಗೆ ಬದಲಾಗುತ್ತದೆ. ಜೆಟ್ ವಿಮಾನವು $1500\sqrt{3}$m ಸ್ಥಿರ ಎತ್ತರದಲ್ಲಿ ಹಾರಾಡುತ್ತಿದ್ದರೆ ಅದರ ವೇಗವನ್ನು ಕಂಡು ಹಿಡಿಯಿರಿ . $(\sqrt{3} = 1.732)$




**VI** ಕೆಳಗಿನ ಪ್ರಶ್ನೆಗೆ ಉತ್ತರಿಸಿ : **1×5=5**

**38)** **5cm** ತ್ರಿಜ್ಯ ಮತ್ತು **9.8cm** ಎತ್ತರವಿರುವ ಒಂದು ಸಿಲಿಂಡರ್ ಆಕಾರದ ಪಾತ್ರೆಯನ್ನು ನೀರಿನಿಂದ ತುಂಬಲಾಗಿದೆ. ಅರ್ಧಗೋಳದ ವೃತ್ತಾಕಾರದ ಪಾದದ ಮೇಲೆ ನೇರವೃತ್ತಪಾದ ಶಂಕುವನ್ನು ಸಂಪೂರ್ಣವಾಗಿ ಇರಿಸಿರುವ ಘನಾಕೃತಿಯನ್ನು ಪಾತ್ರೆಯೊಳಗೆ ಮುಳುಗಿಸಿದೆ. ಅರ್ಧಗೋಳದ ತ್ರಿಜ್ಯ **3.5cm** ಮತ್ತು ಶಂಕುವಿನ ಎತ್ತರ **5cm** ಆದರೆ ಪಾತ್ರೆಯಲ್ಲಿ ಉಳಿದಿರುವ ನೀರಿನ ಘನಫಲವನ್ನು ಕಂಡುಹಿಡಿಯಿರಿ. $\left(\pi = \frac{22}{7}\right)$

